## ಕರ್ನಾಟಕ ಸರ್ಕಾರ

**ಸಂಖ್ಯೆ:ಗ್ರಾಅಪ 208 ಉಖಾಯೋ2023 (ಭಾಗ-3)**

**ಕರ್ನಾಟಕ ಸರ್ಕಾರದ ಸಚಿವಾಲಯ**
**ಬಹುಮಹಡಿಗಳ ಕಟ್ಟಡ**
**ದಿ:17.05.2023**

# ಜಂಟಿ ಸುತ್ತೋಲೆ

ವಿಷಯ: ಮಹಾತ್ಮಗಾಂಧಿ ನರೇಗಾ ಯೋಜನೆಯ ಕೂಲಿಕಾರರ ಆರೋಗ್ಯ ತಪಾಸಣೆ ನಡೆಸಲು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕೆಎಚ್‌ಪಿಟಿ ಸಹಯೋಗದಲ್ಲಿ **"ಗ್ರಾಮ ಆರೋಗ್ಯ"** ಕಾರ್ಯಕ್ರಮದಡಿಯಲ್ಲಿ ಸಾಮೂಹಿಕ ಆರೋಗ್ಯ ತಪಾಸಣೆ ಕೈಗೊಳ್ಳುವ ಬಗ್ಗೆ.

ಉಲ್ಲೇಖ:
1. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ಸುತ್ತೋಲೆ: ಆರ್‌ಡಿಪಿಆರ್/88/ಜಿಪಿಎ/2022 ದಿ:04.08.2022
2. ಕರ್ನಾಟಕ ಪಂಚಾಯತ್‌ರಾಜ್ ಆಯುಕ್ತಾಲಯದ ಆದೇಶ ಪತ್ರ ಸಂಖ್ಯೆ: ಕಪಂರಾಆ/ಅಭಿವೃದ್ಧಿ/ಗ್ರಾಪಂಆಅಅ/297/2022, ದಿ:02.09.2022

*******

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಮಹಾತ್ಮಗಾಂಧಿ ನರೇಗಾ ಯೋಜನೆಯಡಿ ಗ್ರಾಮೀಣ ಪ್ರದೇಶದ ಕುಟುಂಬಗಳ ಜೀವನಾಧಾರ ಸುಧಾರಣೆಗೆ ವರ್ಷದಲ್ಲಿ 100 ದಿವಸ ಕೆಲಸ ಖಾತ್ರಿಪಡಿಸುತ್ತಿದೆ. ಅಕುಶಲ ಕೆಲಸಕ್ಕಾಗಿ ರಾಜ್ಯದಲ್ಲಿ ಸುಮಾರು 182 ಲಕ್ಷ ಕೂಲಿಕಾರರು ನೋಂದಾಯಿಸಿಕೊಂಡಿದ್ದಾರೆ. ಈ ಕೂಲಿಕಾರರಿಗೆ ಕಾಯಕದೊಂದಿಗೆ ಆರೋಗ್ಯವನ್ನು ಉತ್ತೇಜಿಸುವ ಸಲುವಾಗಿ ಗ್ರಾಮಪಂಚಾಯಿತಿ ಮತ್ತು ಪಂಚಾಯತ್‌ರಾಜ್ ಇಲಾಖೆಯಡಿ ಆರಂಭಿಸಿರುವ ಗ್ರಾಮಪಂಚಾಯಿತಿ ಆರೋಗ್ಯ ಅಮೃತ ಅಭಿಯಾನದಡಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಕೆಎಚ್‌ಪಿಟಿ ಸಹಯೋಗದಲ್ಲಿ ಹಲವು ಗ್ರಾಮಪಂಚಾಯಿತಿಗಳಲ್ಲಿ ಉಚಿತ ಆರೋಗ್ಯ ತಪಾಸಣೆಯನ್ನು ಹಮ್ಮಿಕೊಳ್ಳಲಾಗಿರುತ್ತದೆ. ನರೇಗಾ ಯೋಜನೆಯ ಸುಮಾರು 2ಲಕ್ಷ ಕೂಲಿಕಾರರು ಆರೋಗ್ಯ ತಪಾಸಣೆ ಮಾಡಿಸಿಕೊಂಡಿದ್ದಾರೆ. ಇನ್ನುಳಿದ ನೋಂದಾಯಿತ ಕೂಲಿಕಾರರ ಆರೋಗ್ಯ ತಪಾಸಣೆಯನ್ನು ನಡೆಸುವ ಉದ್ದೇಶದಿಂದ "ಗ್ರಾಮ ಆರೋಗ್ಯ" ಕಾರ್ಯಕ್ರಮದಡಿ ಆರೋಗ್ಯ ತಪಾಸಣೆಯನ್ನು 22ಮೇ 2023 ರಿಂದ 22 ಜೂನ್2023ರ ಒಳಗೆ ರಾಜ್ಯದ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಹಮ್ಮಿಕೊಳ್ಳಲು ಯೋಜಿಸಲಾಗಿದೆ.

**ಉದ್ದೇಶಗಳು:**

1. ಗ್ರಾಮಪಂಚಾಯಿತಿ ಮಟ್ಟದಲ್ಲಿ ನೋಂದಾಯಿತ ಎಲ್ಲಾ ಕೂಲಿಕಾರರ ಆರೋಗ್ಯ ತಪಾಸಣೆ ನಡೆಸುವ ಮೂಲಕ ಕೂಲಿಕಾರರ ಪ್ರಸ್ತುತ ಎದುರಿಸುತ್ತಿರುವ ಅನಾರೋಗ್ಯ ಸಮಸ್ಯೆ, ಸಂಭಾವ್ಯ ಆರೋಗ್ಯ ಸಮಸ್ಯೆಗಳನ್ನು ಪರೀಕ್ಷಿಸಿ ಸೂಕ್ತ ಚಿಕಿತ್ಸೆ ಪಡೆಯಲು ಸಲಹೆ ನೀಡುವುದು.
2. ವೈಯಕ್ತಿಕ ಮತ್ತು ಸಾಮೂಹಿಕ ಆರೋಗ್ಯ ಶುಚಿತ್ವದಿಂದ ತಡೆಗಟ್ಟಬಹುದಾದ ಸಾಂಕ್ರಾಮಿಕ ರೋಗಗಳ ಬಗ್ಗೆ ಜಾಗೃತಿ ಮೂಡಿಸುವುದು.
3. ಸಾಮೂಹಿಕ ಆರೋಗ್ಯ ತಪಾಸಣೆ ಮೂಲಕ ಕೂಲಿಕಾರರ ಆರೋಗ್ಯ ದತ್ತಾಂಶದ ಆಧಾರದ ಮೇಲೆ ನರೇಗಾ ಯೋಜನೆಯಡಿ ಹೊಸ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಇತರೆ ಇಲಾಖೆಗಳ ಸೌಲಭ್ಯಗಳನ್ನು ಒಗ್ಗೂಡಿಸುವಿಕೆ ಮೂಲಕ ಕಲ್ಪಿಸುವುದು.
4. ಆರೋಗ್ಯ ತಪಾಸಣೆ ಮೂಲಕ ನರೇಗಾ ಯೋಜನೆ ಬಗ್ಗೆ ವ್ಯಾಪಕ ಜನಜಾಗೃತಿ ಮೂಡಿಸುವುದು.

**ಕಾರ್ಯವಿಧಾನ:**

1. ಉಲ್ಲೇಖ(1)ರಲ್ಲಿನ ಸುತ್ತೋಲೆಯಲ್ಲಿ ಗ್ರಾಮಪಂಚಾಯತಿ ಅಮೃತ ಆರೋಗ್ಯ ಅಭಿಯಾನ ಅನುಷ್ಠಾನ ಕುರಿತು ವಿವರವಾಗಿ ತಿಳಿಸಲಾಗಿದೆ. ಸದರಿ ಅಭಿಯಾನದಡಿ ಗ್ರಾಮಪಂಚಾಯಿತಿಗಳಿಂದ ಈಗಾಗಲೇ ನರೇಗಾ ಕೂಲಿಕಾರರಿಗೆ ಆರೋಗ್ಯ ತಪಾಸಣೆ ನಡೆಸಲಾಗಿರುತ್ತದೆ. ತಪಾಸಣೆ ಮಾಡಲಾದ ಕೂಲಿಕಾರರ ಮಾಹಿತಿಯನ್ನು ಪಡೆದು ಉಳಿದ ಕೂಲಿಕಾರರ ಆರೋಗ್ಯ ತಪಾಸಣೆ ನಡೆಸಲು ಗ್ರಾಮ ಆರೋಗ್ಯ" ವನ್ನು ಹಮ್ಮಿಕೊಳ್ಳುವುದು.

2. ಗ್ರಾಮ ಆರೋಗ್ಯದಡಿ ಈ ಕೆಳಕಂಡ ವಿಷಯಗಳ ಬಗ್ಗೆ ಜಾಗೃತಿ ಮೂಡಿಸಿ ಆರೋಗ್ಯ ತಪಾಸಣೆ ನಡೆಸುವುದು.
    1. ಅಸಂಕ್ರಾಮಿಕ ರೋಗಗಳ ಸ್ಕ್ರೀನಿಂಗ್ (Non communicable disease screening)–ರಕ್ತದೊತ್ತಡ, ಮಧುಮೇಹ ಪರೀಕ್ಷೆ
    2. ಟಿಬಿ ಸ್ಕ್ರೀನಿಂಗ್ (Verbal Screening)
    3. ಅಪೌಷ್ಠಿಕತೆ
    4. ರಕ್ತಹೀನತೆ
    5. ಮಾನಸಿಕ ಆರೋಗ್ಯಕ್ಕೆ ಬೆಂಬಲ
3. **ಆರೋಗ್ಯ ಕಾಯಕೋತ್ಸವ ವೇಳಾ ಪಟ್ಟಿ:** ಪ್ರತಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಬರುವ ಗ್ರಾಮಗಳಲ್ಲಿ ಚಾಲ್ತಿಯಲ್ಲಿರುವ ಸಮುದಾಯ ಕಾಮಗಾರಿ ಸ್ಥಳಗಳಲ್ಲಿ ಕೂಲಿಕಾರರನ್ನು ಸಂಘಟಿಸಿ ಕೆಳಕಂಡಂತೆ ಆರೋಗ್ಯ ತಪಾಸಣೆಯನ್ನು ಕೈಗೊಳ್ಳುವುದು.

| | |
|---|---|
| ತರಬೇತಿ | 20 ಮೇ 2023ರಂದು ಆಯುಕ್ತಾಲಯ ಹಾಗೂ ಕೆ.ಎಚ್.ಪಿ.ಟಿ ದಿಂದ ನಡೆಸುವ ವರ್ಚುಯಲ್ ತರಬೇತಿ ಕಾರ್ಯಗಾರದಲ್ಲಿ ಗ್ರಾಮಪಂಚಾಯಿತಿ ಅಧ್ಯಕ್ಷರು, ಉಪಾಧ್ಯಕ್ಷರು, ಪಿಡಿಓ/ಕಾರ್ಯದರ್ಶಿ, ಗ್ರಾಮ ಕಾಯಕ ಮಿತ್ರ ಮತ್ತು ಕಾಯಕ ಬಂಧು ಹಾಗೆಯೇ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ಸಹಾಯಕ ನಿರ್ದೇಶಕರು, GPAAA ತಾಲ್ಲೂಕು ಸಂಯೋಜಕರು, ಟಿಐಇಸಿ ಮತ್ತು ಜಿಲ್ಲಾ ಮಟ್ಟದಲ್ಲಿ ಜಿಪಿಎಎಎ ಉಸ್ತುವಾರಿ ಅಧಿಕಾರಿ, ಉಪಕಾರ್ಯದರ್ಶಿ/ಯೋಜನಾ ನಿರ್ದೇಶಕರು(ನರೇಗಾ ಉಸ್ತುವಾರಿ) ಡಿಐಇಸಿ ಹಾಗೂ ಜಿಪಿಎಎಎ ಜಿಲ್ಲಾ ಕಾರ್ಯಕ್ರಮ ಸಂಯೋಜಕರು ರವರು ಕಡ್ಡಾಯವಾಗಿ ಹಾಜರಾಗುವುದು. |
| ಸೂಕ್ಷ್ಮ ಯೋಜನೆ ತಯಾರಿ | ಉಲ್ಲೇಖ(1) ಸುತ್ತೋಲೆಯಲ್ಲಿ ತಿಳಿಸಿರುವಂತೆ, ಆರೋಗ್ಯ ತಪಾಸಣೆ ನಡೆಸುವ ದಿನ, ಸ್ಥಳ, ಕೂಲಿಕಾರರ ಭಾಗವಹಿಸುವಿಕೆ ಆಧಾರದ ಮೇಲೆ ಸೂಕ್ಷ್ಮ ಕ್ರಿಯಾ ಯೋಜನೆಯನ್ನು ಗ್ರಾಮ ಪಂಚಾಯಿತಿಯಿಂದ ತಯಾರಿಸುವುದು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಯವರಿಂದ ಗ್ರಾಮ ಪಂಚಾಯಿತಿವಾರು ಸದರಿ ಸೂಕ್ಷ್ಮ ಯೋಜನೆಯನ್ನು ಪಡೆದು ಆಯುಕ್ತಾಲಯಕ್ಕೆ ಸಲ್ಲಿಸುವುದು. (ನಮೂನೆ–1 ಲಗತ್ತಿಸಿದೆ) |
| ಗ್ರಾಮ ಆರೋಗ್ಯಕ್ಕೆ ಚಾಲನೆ | 22 ಮೇ 2023 ರಿಂದ 22 ಜೂನ್ 2023ರವರೆಗೆ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಆರೋಗ್ಯ ತಪಾಸಣೆಯನ್ನು ಹಮ್ಮಿಕೊಂಡು ನೋಂದಾಯಿತ ಕೂಲಿಕಾರರ ಆರೋಗ್ಯ ತಪಾಸಣೆ ನಡೆಸುವುದು. 22ಮೇ 2023 ರಂದು ಅಪರ ಮುಖ್ಯ ಕಾರ್ಯದರ್ಶಿ, ಗ್ರಾ.ಅ ಮತ್ತು ಪಂ.ರಾಜ್ ಇಲಾಖೆ ರವರಿಂದ ರಾಜ್ಯಮಟ್ಟದಲ್ಲಿ ಅಭಿಯಾನಕ್ಕೆ ಚಾಲನೆ ನೀಡಲಾಗುವುದು, ಅದೇ ರೀತಿ ಜಿಲ್ಲೆಗಳಲ್ಲಿ ಹಾಗೂ ತಾಲ್ಲೂಕುಗಳಲ್ಲಿ ಸ್ಥಳೀಯ ಜನಪ್ರತಿನಿಧಿಗಳ ನೇತೃತ್ವದಲ್ಲಿ ಕಾರ್ಯಕ್ರಮಕ್ಕೆ ಚಾಲನೆ ನೀಡುವುದು. |
| ಐಇಸಿ ಜಾಗೃತಿ | ಕಾರ್ಯನಿರ್ವಾಹಕ ಅಧಿಕಾರಿಗಳು ಆರೋಗ್ಯ ತಪಾಸಣೆ ಕೈಗೊಳ್ಳಲು ನೀಡುವ ವೇಳಾಪಟ್ಟಿಯಂತೆ ಗ್ರಾಮಪಂಚಾಯಿತಿ ಮಟ್ಟದಲ್ಲಿ ವಿವಿಧ ಮಾಧ್ಯಮಗಳ (ಸ್ವಚ್ಛತಾ ವಾಹಿನಿ ಸೇರಿದಂತೆ)ಮೂಲಕ ಜಾಗೃತಿ ಮೂಡಿಸುವುದು. ಸದರಿ ಜಾಗೃತಿಯ ಉಸ್ತುವಾರಿಯನ್ನು ಡಿಐಇಸಿ ಹಾಗೂ ಟಿಐಇಸಿಯವರು ನಿರ್ವಹಿಸುವುದು. |
| ಆರೋಗ್ಯ ಉಪಭೋಗ್ಯ ವಸ್ತುಗಳ ಖರೀದಿ | ಆರೋಗ್ಯ ತಪಾಸಣೆ ನಡೆಸಲು ಗ್ರಾಮಪಂಚಾಯಿತಿ ಆರೋಗ್ಯ ಅಮೃತ ಅಭಿಯಾನವಡಿಯಲ್ಲಿ ಪ್ರತಿ ಗ್ರಾಮಪಂಚಾಯಿತಿಗೆ ಒಂದು ಕಿಟ್‌ನ್ನು ಒದಗಿಸಲಾಗಿರುತ್ತದೆ. ಸದರಿ ಕಿಟ್‌ನ್ನು ಆರೋಗ್ಯ ತಪಾಸಣೆಗೆ ಬಳಸಿಕೊಳ್ಳುವುದು ಹಾಗೆಯೇ ರಾಷ್ಟ್ರೀಯ ಆರೋಗ್ಯ ಅಭಿಯಾನವಡಿ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ವಿತರಿಸಿರುವ ಉಪಭೋಗ್ಯವಸ್ತುಗಳನ್ನು ಬಳಸಿಕೊಳ್ಳುವುದು. ಸದರಿ ಕೇಂದ್ರದಿಂದ ಉಪಭೋಗ್ಯವಸ್ತುಗಳು ಲಭ್ಯವಿಲ್ಲದಿದ್ದಲ್ಲಿ ಗ್ರಾಮಪಂಚಾಯಿತಿಯಲ್ಲಿ ಲಭ್ಯ ಅನುದಾನದಲ್ಲಿ ಭರಿಸುವುದು. ಆರೋಗ್ಯ ತಪಾಸಣೆಗೆ ಅಗತ್ಯವಿರುವ ಭೋಗ್ಯವಸ್ತುಗಳು: Hemoglobino strips, Glucostrips, Blood Lancet Round - Pack of 100s, Alcohol Swabs - Pack of 100s |

4. **ಜವಾಬ್ದಾರಿಗಳ ಹಂಚಿಕೆ:**

**(1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ:**

1. ಆರೋಗ್ಯ ತಪಾಸಣೆಗೆ ಅವಶ್ಯಕವಿರುವ ಉಪಭೋಗ್ಯ ವಸ್ತುಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪಡೆಯಲು, ಒಂದುವೇಳೆ ಸದರಿ ಕೇಂದ್ರಗಳಲ್ಲಿ ಲಭ್ಯವಿಲ್ಲದಿದ್ದಲ್ಲಿ ಗ್ರಾಮಪಂಚಾಯಿತಿಯಲ್ಲಿ ಲಭ್ಯ ಅನುದಾನದಲ್ಲಿ ಭರಿಸಲು ಸೂಚಿಸುವುದು.
2. ಆರೋಗ್ಯ ತಪಾಸಣೆ ಮೇಲ್ವಿಚಾರಣೆ ಜವಾಬ್ದಾರಿಯನ್ನು ಜಿಲ್ಲಾ ಮಟ್ಟದಲ್ಲಿ GPAAA ಉಸ್ತುವಾರಿ ಅಧಿಕಾರಿ/ಉಪಕಾರ್ಯದರ್ಶಿ/ಯೋಜನಾ ನಿರ್ದೇಶಕರು(ನರೇಗಾ ಉಸ್ತುವಾರಿ)ಗಳಿಗೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗೆ ವಹಿಸುವುದು.
3. "ಗ್ರಾಮ ಆರೋಗ್ಯ" ಕುರಿತು ರಾಜ್ಯಮಟ್ಟದಿಂದ ಆಯೋಜಿಸಲಾಗುವ ತರಬೇತಿಗೆ ತಮ್ಮ ಜಿಲ್ಲೆಯಿಂದ ಸಂಬಂಧಿಸಿದ ಎಲ್ಲರು ಭಾಗವಹಿಸುವಂತೆ ಕ್ರಮವಹಿಸುವುದು.
4. "ಗ್ರಾಮ ಆರೋಗ್ಯ" ಕುರಿತು ಜಾಗೃತಿ ಮೂಡಿಸುವುದು ಹಾಗೂ ಅದರ ಪ್ರಗತಿಯನ್ನು ಕಾಲ ಕಾಲಕ್ಕೆ ಆಯುಕ್ತಾಲಯಕ್ಕೆ ಕಳುಹಿಸುವುದು.

**(2) ಜಿಲ್ಲಾ ಆರೋಗ್ಯ ಅಧಿಕಾರಿ:**

1. ಗ್ರಾಮಪಂಚಾಯಿತಿಯಿಂದ ಆಯೋಜಿಸಲಾಗುವ "ಗ್ರಾಮ ಆರೋಗ್ಯ" ಕಾರ್ಯಕ್ರಮದಡಿ ಆರೋಗ್ಯ ತಪಾಸಣೆ ಮಾಡಲು ಈಗಾಗಲೇ GPAAAದಡಿ ಗ್ರಾಮಪಂಚಾಯಿತಿಗೆ ಒದಗಿಸಿರುವ ಆರೋಗ್ಯ ಕಿಟ್ ಅಥವಾ ಆರೋಗ್ಯ ಇಲಾಖೆಯ ಕಿಟ್‌ನ್ನು ಮತ್ತು ಉಪಭೋಗ್ಯ ವಸ್ತುಗಳನ್ನು ಬಳಸಲು ಕ್ರಮವಹಿಸುವುದು.
2. ಆರೋಗ್ಯ ತಪಾಸಣೆ ಮಾಡಲು ಎಲ್ಲಾ ಹಂತದ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿಯನ್ನು ನಿಯೋಜಿಸುವುದು ಹಾಗೂ ಆರೋಗ್ಯ ತಪಾಸಣೆ ಯಶಸ್ವಿಯಾಗಿ ನಡೆಯುವಂತೆ ಕಾರ್ಯನಿರ್ವಹಿಸುವುದು.
3. ಜಿಲ್ಲಾ ಮಟ್ಟದಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸಿ ಅಗತ್ಯ ಸಲಹೆ, ಸೂಚನೆ ನೀಡುವುದು ಮತ್ತು ಸಂಯೋಜಿಸುವುದು. ತಾಲ್ಲೂಕು ಮಟ್ಟದಲ್ಲಿ ನಡೆಯುವ ಸಭೆಯಲ್ಲಿ ತಾಲ್ಲೂಕು ಮಟ್ಟದ ವೈದ್ಯಾಧಿಕಾರಿಗಳು ಭಾಗವಹಿಸುವಂತೆ ಸೂಚಿಸುವುದು.
4. ನರೇಗಾ ಕೂಲಿಕಾರರಿಗೆ ಆಯುಷ್ಮಾನ್ ಭಾರತ್ ಹೆಲ್ತ್ ಅಕೌಂಟ್(ABHA) ಕಾರ್ಡ್ ವಿತರಿಸುವುದು

**(3)ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿ:**

1. "ಗ್ರಾಮ ಆರೋಗ್ಯ" ಕುರಿತು ರಾಜ್ಯಮಟ್ಟದಿಂದ ಆಯೋಜಿಸಲಾಗುವ ತರಬೇತಿಗೆ ತಮ್ಮ ತಾಲ್ಲೂಕಿನಿಂದ ಸಂಬಂಧಿಸಿದ ಎಲ್ಲರು ಭಾಗವಹಿಸುವಂತೆ ಕ್ರಮವಹಿಸುವುದು.
2. "ಗ್ರಾಮ ಆರೋಗ್ಯ" ಆಯೋಜನೆಯನ್ನು 22ಮೇ 2023 ರಿಂದ 22ಜೂನ್ 2023ರ ಒಳಗೆ ಪೂರ್ಣಗೊಳಿಸಲು ಗ್ರಾಮಪಂಚಾಯಿತಿವಾರು ಸೂಕ್ಷ್ಮ ಯೋಜನೆಯನ್ನು ಸಂಗಹಿಸಲು ಸಹಾಯಕ ನಿರ್ದೇಶಕರಿಗೆ ವಹಿಸುವುದು ಹಾಗೂ ಕ್ರಿಯಾಯೋಜನೆಯನ್ನು ಜಿಲ್ಲಾ ಪಂಚಾಯಿತಿಗೆ ಸಲ್ಲಿಸುವುದು.
3. ನರೇಗಾ ಕಾಮಗಾರಿ ಸ್ಥಳದಲ್ಲಿ "ಗ್ರಾಮ ಆರೋಗ್ಯ" ವನ್ನು ಆಯೋಜಿಸಲು ಅಗತ್ಯ ಸೌಲಭ್ಯಗಳನ್ನು ಕಲ್ಪಿಸಲು ಸಂಬಂಧಿಸಿದವರಿಗೆ ಸೂಚಿಸುವುದು ಹಾಗೂ ಇದರ ಉಸ್ತುವಾರಿ ವಹಿಸುವುದು.
4. ಆರೋಗ್ಯ ತಪಾಸಣೆಗೆ ಒದಗಿಸಿರುವ ಮೂಲ ಸೌಲಭ್ಯ ವೆಚ್ಚವನ್ನು ಗ್ರಾಮಪಂಚಾಯಿತಿಗಳಿಗೆ ಐಇಸಿ ವೆಚ್ಚದಡಿ ಕೆ.ಟಿ.ಪಿ.ಪಿ ನಿಯಮಾನುಸಾರ ರೀಟ್ ಮಾಡ್ಯುಲ್ ಮೂಲಕ ಬಿಡುಗಡೆ ಮಾಡುವುದು.
5. "ಗ್ರಾಮ ಆರೋಗ್ಯ" ಆಯೋಜನೆ, ಮಾಹಿತಿ ಸಂಗ್ರಹ, ಛಾಯಾಚಿತ್ರ ಹಾಗೂ ಯಶೋಗಾಥೆಗಳನ್ನು ಸಿದ್ಧಪಡಿಸಿ ಜಿಲ್ಲಾಪಂಚಾಯಿತಿಗೆ ಸಲ್ಲಿಸುವುದು.
6. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ GPAAA ತಾಲ್ಲೂಕು ಸಂಯೋಜಕರ ಜೊತೆ ಕಾಲ ಕಾಲಕ್ಕೆ ಸಭೆ ನಡೆಸಿ "ಗ್ರಾಮ ಆರೋಗ್ಯ" ಅಭಿಯಾನಕ್ಕೆ ಅಗತ್ಯ ವ್ಯವಸ್ಥೆಯನ್ನು ಕಲ್ಪಿಸುವುದು.
7. "ಗ್ರಾಮ ಆರೋಗ್ಯ" ಮಾಹಿತಿಯನ್ನು ಗೂಗಲ್ ಸ್ಪ್ರೆಡ್ ಶೀಟ್‌ನಲ್ಲಿ ಪಡೆದು ಜಿಲ್ಲಾಪಂಚಾಯಿತಿಗೆ ಸಲ್ಲಿಸುವುದು.

**(5)ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿ:**

1. ಗ್ರಾಮಪಂಚಾಯಿತಿ ಪಿಡಿಓ ರವರು ಸ್ಥಳೀಯ ಆರೋಗ್ಯ ಮತ್ತು ಕ್ಷೇಮ ಕೇಂದ್ರ ಮತ್ತು ಪ್ರಾಥಮಿಕ ಕೇಂದ್ರದ ಸಹಯೋಗದಲ್ಲಿ ಉಲ್ಲೇಖ(1) ಸುತ್ತೋಲೆಯಲ್ಲಿ ತಿಳಿಸಿರುವಂತೆ, ಆರೋಗ್ಯ ತಪಾಸಣೆ ನಡೆಸುವ ದಿನ, ಸ್ಥಳ, ಕೂಲಿಕಾರರ ಭಾಗವಹಿಸುವಿಕೆ ಆಧಾರದ (430 ಕ್ಕಿಂತ ಹೆಚ್ಚು ಕೂಲಿಕಾರರು ಭಾಗವಹಿಸುವ ಕಾಮಗಾರಿಗಳಿಗೆ ಮೊದಲ ಆದ್ಯತೆ) ಮೇಲೆ ಸೂಕ್ಷ್ಮ ಕ್ರಿಯಾಯೋಜನೆಯನ್ನು ಗ್ರಾಮಪಂಚಾಯಿತಿಯಿಂದ ತಯಾರಿಸುವುದು. ಸದರಿ ಕ್ರಿಯಾಯೋಜನೆಯನ್ನು ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಸಲ್ಲಿಸುವುದು. (ನಮೂನೆ-1 ಲಗತ್ತಿಸಿದೆ)
2. "ಗ್ರಾಮ ಆರೋಗ್ಯ" ಕುರಿತು ಗ್ರಾಮಪಂಚಾಯಿತಿ ಮಟ್ಟದಲ್ಲಿ ಸ್ವಚ್ಛತಾ ವಾಹಿನಿ ಬಳಸಿಕೊಂಡು ವ್ಯಾಪಕ ಪ್ರಚಾರ ನೀಡುವುದು.
3. "ಗ್ರಾಮ ಆರೋಗ್ಯ" ಆಯೋಜಿಸಲು ಸೂಕ್ತ ನೆರಳು, ಆರೋಗ್ಯ ತಪಾಸಣೆಗೆ ಟೇಬಲ್ & ಚೇರು. ಕುಡಿಯುವ ನೀರು, ಸೇರಿದಂತೆ ಅಗತ್ಯ ಸೌಲಭ್ಯಗಳನ್ನು ಕಲ್ಪಿಸುವುದು.
4. ಆರೋಗ್ಯ ತಪಾಸಣೆಗೆ ಉಪಭೋಗ್ಯ ವಸ್ತುಗಳನ್ನು ಆರೋಗ್ಯ ಮತ್ತು ಕ್ಷೇಮ ಕೇಂದ್ರ ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಪಡೆಯುವುದು, ಸದರಿ ಕೇಂದ್ರಗಳಲ್ಲಿ ಲಭ್ಯವಿಲ್ಲದಿದ್ದಲ್ಲಿ ಗ್ರಾಮಪಂಚಾಯಿತಿ ಲಭ್ಯ ಅನುದಾನದಲ್ಲಿ ಖರೀದಿಗೆ ಕ್ರಮವಹಿಸುವುದು.
5. "ಗ್ರಾಮ ಆರೋಗ್ಯ" ಕಾರ್ಯಕ್ರಮಕ್ಕೆ ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸಿ ಆರೋಗ್ಯ ಅಭಿಯಾನವನ್ನು ಯಶಸ್ವಿಗೊಳಿಸುವುದು ಹಾಗೂ ನರೇಗಾ ಕೂಲಿಕಾರರ ಇ-ಶ್ರಮ ನೋಂದಣಿ ಮಾಡಿಸಲು ಕ್ರಮವಹಿಸುವುದು.
6. ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಕೂಲಿಕಾರರ ಮಾಹಿತಿಯನ್ನು ಜಾಬ್‌ಕಾರ್ಡ್ ನೋಂದಣಿ ವಹಿಯಲ್ಲಿ ಪರಿಶೀಲಿಸಿಕೊಂಡು ಮಾಹಿತಿ ಸಂಗ್ರಹಿಸುವುದು ಹಾಗೂ ಪಂಚತಂತ್ರ-2 ರಲ್ಲಿ ದತ್ತಾಂಶ ಆರೋಹಿಸುವುದು.(ನಮೂನೆ-3 ಲಗತ್ತಿಸಿದ ಗೂಗಲ್ ಸ್ಪ್ರೆಡ್ ಶೀಟ್)
7. "ಗ್ರಾಮ ಆರೋಗ್ಯ" ಕಾರ್ಯಕ್ರಮಕ್ಕೆ ಮೂಲಸೌಲಭ್ಯ ಒದಗಿಸಿದ ಆರ್ಥಿಕ ವೆಚ್ಚ (ಮೂಲ ಸೌಲಭ್ಯ)ದ ಬಿಲ್ಲುಗಳನ್ನು ಕೆ.ಟಿ.ಪಿ.ಪಿ ನಿಯಮಾನುಸಾರ ಸಿದ್ಧಪಡಿಸಿ ಹಣ ಬಿಡುಗಡೆಗೆ ತಾಲ್ಲೂಕು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸುವುದು.

(ಉಮಾ ಮಹಾದೇವನ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಪ.ರಾಜ್)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

(ಎಲ್.ಕೆ.ಅತೀಕ್)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

**ಗೆ,**

1. ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ ಸರ್ಕಾರ ಬೆಂಗಳೂರು
2. ಆಯುಕ್ತರು, ಪಂಚಾಯತ್‌ರಾಜ್ ಆಯುಕ್ತಾಲಯ, ಕೆ.ಜಿ.ರಸ್ತೆ, ಗಾಂಧಿನಗರ, ಬೆಂಗಳೂರು
3. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆ ಬೆಂಗಳೂರು
4. ಆಯುಕ್ತರು ಗ್ರಾಮೀಣಾಭಿವೃದ್ಧಿ, ರಾಜಾಜಿನಗರ ಐಟಿ ಪಾರ್ಕ್, ಬೆಂಗಳೂರು
5. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯಸೌಧ, ಮಾಗಡಿ ರಸ್ತೆ, ಬೆಂಗಳೂರು
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯಿತಿಗಳು
7. ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯಿತಿಗಳು
8. ಪಂಚಾಯತ್ ಅಭಿವೃದ್ಧಿ ಅಧಿಕಾರಿ, ರಾಜ್ಯದ ಎಲ್ಲಾ ಗ್ರಾಮಪಂಚಾಯಿತಿಗಳು

**ಪ್ರತಿಯನ್ನು ಮಾಹಿತಿಗಾಗಿ:**

1. ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ರವರ ಆಪ್ತ ಕಾರ್ಯದರ್ಶಿ
3. ಮುಖ್ಯ ಅಭಿಯಂತರರು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕೆ.ಎಚ್.ಪಿ.ಟಿ 5ನೇ ಮಹಡಿ, ರಾಜಾಜಿನಗರ ಐಟಿ ಪಾರ್ಕ್, ಬೆಂಗಳೂರು
5. ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು, ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ
6. ಜಂಟಿ ನಿರ್ದೇಶಕರು(ತಾಂತ್ರಿಕ, ಆಡಳಿತ ಹಾಗೂ ತೋಟಗಾರಿಕೆ) ಗ್ರಾಮೀಣಾಭಿವೃದ್ಧಿ ಆಯುಕ್ತಾಲಯ